ಅದರಾಗ ನೂರು ತೂತು. ಎಲ್ಲಾ ಮೀನಿನ ಬಲಿ ಇದ್ಧಂಗ. ಅದು ಬರೇ ಸ್ನಾನ ಮಾಡ್ಲಿಕ್ಕಷ್ಟ. ಇನ್ನೊಂದಕ್ಕ... ಚರಿಗಿ ಹಿಡಕೊಂಡು ಹೊಳಿ ಕಡೆ ಓಡಿ ಹೋಗಬೇಕಾಗ್ತಿತ್ತು. ನಮ್ಮ ಈ ಅರಮನಿ ಮಳಿಗಾಲದಾಗ ಭಾಳ ಸೋರತಿತ್ತು. ಎಲ್ಲಾ ಕಡೆ ಭಾಂಡಿ ಇಟ್ಟು ಅದರ ನಡುವ ಒಬ್ಬರ ಮ್ಯಾಲೊಬ್ಬರು ಮಲಕೋತಿದ್ವಿ. ಖಾನಾಪುರ, ಬೆಳಗಾವ್ಯಾಗ ಎಲ್ಲಾ ಮಳಿಗಾಲದಾಗ ಸತತ ಜಿಟಿಜಿಟಿ ಮಳಿ ಹೊಡದ... ಹೊಡೀತಿತ್ತು. ನಾವು 'ಗೌತಿ ಭಾ'ದ ಕಾಡೆ(ಕಷಾಯ) ಕುಡದ... ಕುಡೀತಿದ್ವಿ.

ಗಂಗಾ ನಮ್ಮೊಳಗ ಧೊಡ್ಡಾಕಿ. ಭಾಳ ಶ್ಯಾಣ್ಯಾ ಇದ್ಲು. ಅವ್ವ, ಅಪ್ಪ 'ಗಂಗಾ' ಅನ್ನೋದು ನೋಡಿ ನಾವೂ ಹಂಗ ಕರೀತಿದ್ವಿ. ಅವ್ವನಂಗ ಛಂದನೂ ಇದ್ಲು. ಸಂಪಿಗಿ ಹೂವಿನ್ಹಂಗ ಮೂಗು, ಅದ ಬಣ್ಣ, ಕಣ್ಣು ಥೇಟ್ ಹೇಮಾಮಾಲಿನಿ ಗತೆ. ಆಗ ಶೋಲೆ ಸಿನಿಮಾ ಪ್ರಸಿದ್ಧಾಗಿತ್ತು. ಆದರ ಶೋಲೆದ ಬಸಂತಿ ಗತೆ ಅಕಿ ಜೋರಲ್ಲ. ಭಾಳ ಮೆತ್ತಗ. ಅಪ್ಪ, ಅವ್ವಗ ಭಾಳ ಅಂಜತಿದ್ಲು. ನಮ್ಮನ್ನೆಲ್ಲಾ ಎಷ್ಟ ಪ್ರೀತಿ ಮಾಡತಿದ್ಲು... ಅಂದರ ಬಡತನಾನ ನಮಗ ಭಂಗಾರಾಗಿತ್ತು. ಅಕಿ ಕೆಳಗ ನಾನು. ಬಾಳೋಜಿ, ಬಾಳು ಆಗಿದ್ದೆ. ಸಣ್ಣಾವ್ರಿಗೆ ಬಾಳುದಾದಾ ಆದೆ. ಸಾಲಿಗೆ ಸಮಾ ಹೋಗಿ ಓದು, ಬರಿ ಮಾಡ್ತಿದ್ದೆ. ಆದರ ಮನ್ಯಾಗಿನ ತ್ರಾಸು ನೋಡಿ ತಲಿ ಚಿಟ್ಟು ಹಿಡಿತಿತ್ತು. ಏನೂ ಬ್ಯಾಡ, ಕೆಲಸಕ್ಕ ಹೋಗಿಬಿಡ್ಲೇನೋ ಅನಸತಿತ್ತು. ಗಂಗಾನ ಮತ್ತ ಸಮಾಧಾನ ಮಾಡಿ ಸಾಲಿಗೆ ಕಳಸತಿದ್ಲು. ನನ್ನ ಕೆಳಗ ತುಕಾರಾಮ. ಅಂವಗ ಸಾಲಿ ಅಂದರ ಅಷ್ಟಕ್ಕಷ್ಟ. ಸಮೀಪ ಹಾಯತಿದ್ದಿದ್ದಿಲ್ಲ. ದೆವ್ವದ ದುಡತಕ್ಕೂ ಸೈ. ಒಲಿಗೆ ಒಣಾ ಕಟಿಗಿ ಆರಸೊದು, ಕುಳ್ಳು ಬಡೀಲಿಕ್ಕೆ ಗಂಗಾಗ ಶಗಣಿ ತಂದು ಕೊಡೋದು, ಹೊಳ್ಯಾಗ ಸಿಕ್ಕ ಮೀನಾ ಹಿಡಕೊಂಡು ಬರೋದು, ಕರದಾವ್ರ ಹೊಲದಾಗ ದುಡದು ಕಾಯಿಪಲ್ಯ, ಕಾಳುಕಡಿ ತಂದು ಮನಿಗ್ವಾಕಿ ಎಷ್ಟೋ ಆಧಾರಾಗ್ತಿದ್ದ. ನನಗ ಅಂಥಾ ಕೆಲಸಾ ಮಾಡ್ಲಿಕ್ಕೆ ಮರ್ಯಾದಿ ಅಡ್ಡ ಬರತಿತ್ತು. ಅಂವನ ಕೆಳಗ ನೀಲೂ. ಸಣ್ಣಾಕಿ. ಅಕಿನೂ ಕಣ್ಣು ಮೂಗಲೆ ಛಂದ ಇದ್ರೂ ಬಣ್ಣ ಮಾತ್ರ ಅಪ್ಪನ ಗೋಧಿ ಬಣ್ಣ. ಅಕೀನೂ ನನ್ನ ಜೋಡೀನ ಓದು, ಬರಿ ಮಾಡಾಕಿ. ಎಲ್ಲರೆ ತ್ವಾಟದಾಗ ಮಾವಿನ ಹಣ್ಣು, ಪೇರಲ, ಚಿಕ್ಕು ತಗೀಲಿಕ್ಕತ್ತಿದ್ರ ನೋಡಕೋತ ನಿಂದ್ರಾಕಿ. 'ತೊಗೊ' ಅಂತ ಎರಡ ಹಣ್ಣ ಕೊಟ್ಟರ ಪರಕಾರದಾಗ ಮುಚಿಗೊಂಡು ಓಡಿ ಬರಾಕಿ. ಆಮ್ಯಾಲ ನಾವೆಲ್ಲಾರು ಕೂಡಿ ಅದನ್ನ ಹಂಚಿಗೊಂಡು ತಿಂತಿದ್ವಿ. ಝಗಳಿಲ್ಲದನ ಪ್ರೀತೀಲೆ ಇರತಿದ್ವಿ. ಎಲ್ಲಾರೂ ಊರಾಗಿನ ಕನ್ನಡ ಸಾಲಿಗೆ ಹೋಗತಿದ್ವಿ.

ಖಾನಾಪುರದಾಗ ಇಟ್ಟಂಗಿ ಫ್ಯಾಕ್ಟರಿ ಇತ್ತು. ಭಾಳ ಮಂದಿ ಅಲ್ಲೇ ಕೆಲಸಕ್ಕ ಹೋಗಾವ್ರು. ಕಾಲೇಜಿದ್ದಿದ್ದಿಲ್ಲ. ಏನರೆ ಹೆಚ್ಚಿಂದು ಕೆಲಸ, ಖರೀದಿ, ಕಾಲೇಜು ಎಲ್ಲಾ ಬೆಳಗಾವೀನ. ಊರಾಗಿನ ಅರ್ಧಾ ಮಂದಿ ದಿನಾ ಬೆಳಗಾವಿಗೆ ಅಡ್ಡ್ಯಾಡತಿದ್ರು. ಅರ್ಧಾ ತಾಸಿನ ಹಾದಿ. ಬಸ್ಸು ಭಾಳ ಇದ್ದಿದ್ದಿಲ್ಲ. ಆಗಿನ ಕರ್ನಾಟಕ ಎಕ್ಸಪ್ರೆಸ್ ಅಂದರ ಈಗಿನ ರಾಣಿ ಚನ್ನಮ್ಮಾ ಗಾಡಿ ಆವಾಗ ಖಾನಾಪುರಕ್ಕ ನಿಂದರತಿದ್ದಿದ್ದಿಲ್ಲ. ಓಡೋ ಗಾಡೀನ ಹೋಗಿ ಹತ್ತಿದ್ರಂತ ಕಾಲೇಜು ಹುಡಗುರು. ಒಬ್ಬ ಡ್ರೈವರ್ ಗುರ್ತಿನಾವ ಭೊಲೊ ಇದ್ದ. ಪಾಪ, ಹುಡುಗುರು ಅಂತ ಗಾಡಿ ಸ್ಲೋ ಮಾಡತಿದ್ನಂತ. ಹುಡುಗುರು ಹತಿಗೊಂಡು ಹೋಗಾವ್ರು. ಒಂದಿವ್ಸ ಇನ್‌ಸ್ಪೆಕ್ಟರ್ ಬಂದಿದ್ದಕ್ಕ ಅಂವ ಸ್ಲೋ ಮಾಡಲೇ ಇಲ್ಲ. ಹುಡುಗುರು ಹೆಂಗೋ ಹತಿಗೊಂಡರು. ಹುಡುಗಿ ಒಬ್ಬಾಕಿ ಹತ್ತಲಿಕ್ಕ ಹೋಗಿ ಕೆಳಗ ಬಿದ್ದು ಜೀಂವಾ ಕಳಕೊಂಡ್ಲಂತ. ಅಂದಿಂದ ಗಾಡಿ ಒಂದ ಮಿನಿಟು ನಿಂದರತದ. ಮಂದಿ ಆರಾಮಾಗಿ ಅಡ್ಡ್ಯಾಡತಾರ. ಊರಾಗ ಕನ್ನಡ, ಮರಾಠಿ